ಸಂಜೀವ್ ಕುಮಾರ್, ಭಾ.ಆ.ಸೇ.
ಸರ್ಕಾರದ ಪ್ರಧಾನ ಕಾರ್ಯದರ್ಶಿ
SANJIV KUMAR, I.A.S.
Principal Secretary to Government

GOVERNMENT OF KARNATAKA

ಕರ್ನಾಟಕ ಸರ್ಕಾರ ಸಚಿವಾಲಯ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
Karnataka Government Secretariat
Rural Development & Panchayat Raj Department

ಅ.ಸ. ಪತ್ರ ಸಂಖ್ಯೆ:ಗ್ರಾಅಪ 36 ಗ್ರಾನೀಸ(2)15 ದಿನಾಂಕ:24.07.2015

ಮಾನ್ಯ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳೆ,

ವಿಷಯ: **2015–16ರ ಸಾಲಿನ ಗ್ರಾಮೀಣ ನೀರು ಪೂರೈಕೆ ಯೋಜನೆಗಳ ಕ್ರಿಯಾ ಯೋಜನೆ ರೂಪಿಸುವ ಕುರಿತು.**

ಉಲ್ಲೇಖ:
1. ಕೇಂದ್ರ ಸರ್ಕಾರದ ಪತ್ರ ಸಂಖ್ಯೆ:No, Q-14018/52(AAP)/2014-DWS(State)ದಿನಾಂಕ:07.01.2014ರ ಮೇಲೆ CE/PRED ದಿನಾಂಕ:17.03.2014ರಿಂದ ದಿ:20.03.2014ರವರೆಗೆ ನಡೆಸಿರುವ ಕ್ರಿಯಾ ಯೋಜನೆ ಸಭಾ ಸೂಚನೆಗಳು.
2. ಸರ್ಕಾರದ ಪತ್ರ ಸಂಖ್ಯೆ: ಗ್ರಾಅಪ 36 ಗ್ರಾನೀಸ(2)15 ದಿನಾಂಕ:23.06.2015 ಮತ್ತು 29.06.2015.

---

2015–16ರ ಸಾಲಿಗೆ ಚಾಲ್ತಿಯಲ್ಲಿರುವ **NRDWP** ಮಾರ್ಗಸೂಚಿಗಳನ್ವಯ ಸ್ಥಳೀಯ ವಾಸ್ತವಿಕ ಅಗತ್ಯತೆ ಆಧರಿಸಿ, ಗ್ರಾಮೀಣ ಕುಡಿಯುವ ನೀರು ಸರಬರಾಜು ಯೋಜನೆಗಳ ವಾರ್ಷಿಕ ಕ್ರಿಯಾ ಯೋಜನೆಯನ್ನು (Appendix-E) ಸಿದ್ಧಪಡಿಸಲು ಎಲ್ಲಾ ಜಿಲ್ಲಾ ಪಂಚಾಯತಿಗಳಿಗೆ ಉಲ್ಲೇಖ(2)ರ ಪತ್ರದ ಮುಖಾಂತರ ದಿನಾಂಕ:30.06.2015ರೊಳಗಾಗಿ ಸರ್ಕಾರಕ್ಕೆ ಕಳುಹಿಸಬೇಕೆಂದು ಸೂಚಿಸಲಾಗಿತ್ತು. ಆದರೆ ಈತಹಲ್‌ವರೆವಿಗೂ ಯಾವ ಜಿಲ್ಲಾ ಪಂಚಾಯತ್‌ಗಳಿಂದಲೂ ಸಿದ್ಧಪಡಿಸಿದ ಕ್ರಿಯಾ ಯೋಜನೆಗಳು ಸರ್ಕಾರದ ಅನುಮೋದನೆಗೆ ಸ್ವೀಕೃತಿಯಾಗಿರುವುದಿಲ್ಲ. ನಿಗದಿತ ದಿನಾಂಕದೊಳಗೆ ಕ್ರಿಯಾ ಯೋಜನೆ ಸಲ್ಲಿಸಲು ವಿಫಲವಾದ ಜಿಲ್ಲಾ ಪಂಚಾಯತಿಗಳಿಗೆ ಅನುದಾನ ಬಿಡುಗಡೆ ಮಾಡಲು ಹಾಗೂ ಅನುಮೋದನೆಯಾಗದೆ 2ನೇ ಕಂತಿನ ಅನುದಾನ ಬಿಡುಗಡೆ ಮಾಡಲು ತಾಂತ್ರಿಕ ತೊಂದರೆಯಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಎಲ್ಲಾ ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ತಮ್ಮ ವೈಯಕ್ತಿಕ ಗಮನ ಹರಿಸಿ ಸಂಬಂಧಿಸಿದ ಕಾರ್ಯಪಾಲಕ ಅಭಿಯಂತರರೊಂದಿಗೆ ಸಮಾಲೋಚಿಸಿ ಶೀಘ್ರವಾಗಿ ಕ್ರಿಯಾ ಯೋಜನೆಯನ್ನು ರೂಪಿಸಿ ದಿನಾಂಕ:31.07.2015ರೊಳಗಾಗಿ ಸರ್ಕಾರದ ಅನುಮೋದನೆ ಪಡೆದುಕೊಳ್ಳುವುದು ತಮ್ಮ ಜವಾಬ್ದಾರಿಯಾಗಿರುತ್ತದೆ. ಯಾವುದೇ ಕಾರಣಕ್ಕೂ ವಿಳಂಬ / ನಿಧಾನಗತಿಯ ಕಾರ್ಯಕ್ಕೆ ಆಸ್ಪದ ನೀಡದೆ ನಿಗದಿತ ಅವಧಿಯೊಳಗೆ ಕ್ರಿಯಾ ಯೋಜನೆಗೆ ಅನುಮೋದನೆ ಪಡೆದುಕೊಳ್ಳಲು ಹಾಗೂ ಮುಂದುವರೆದ ಕಾಮಗಾರಿಗಳಿಗೆ ಜಿಲ್ಲೆಗಳಿಗೆ ನಿಗಧಿಪಡಿಸಿರುವ ಅನುದಾನ ಮಿತಿಯೊಳಗೆ ಬಾಕಿ ಬಿಲ್ ಪಾವತಿಸಲು ಕ್ರಮ ತೆಗೆದುಕೊಳ್ಳಲು ಕೋರಿದೆ.

ಆದರಗಳೊಂದಿಗೆ,

ತಮ್ಮ ವಿಶ್ವಾಸಿ,

ಸಹಿ/-

(ಸಂಜೀವ್ ಕುಮಾರ್)

ಇವರಿಗೆ:
ಎಲ್ಲಾ ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು

**ಪ್ರತಿಯನ್ನು:**
1. ಮುಖ್ಯ ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, 1ನೇ ಮಹಡಿ, ಕೆಹೆಚ್‌ಬಿ ಕಾಂಪ್ಲೆಕ್ಸ್, ಕಾವೇರಿ ಭವನ, ಬೆಂಗಳೂರು–09 ರವರಿಗೆ ಮುಂದಿನ ಕ್ರಮಕ್ಕಾಗಿ ಕಳುಹಿಸಿದೆ.
2. ರಾಜ್ಯದ ಎಲ್ಲಾ (30) ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗಗಳ ಕಾರ್ಯಪಾಲಕ ಅಭಿಯಂತರರು.

(ಸಂಜೀವ್ ಕುಮಾರ್)

ಬಹುಮಹಡಿ ಕಟ್ಟಡ, 3ನೇ ಮಹಡಿ, 3ನೇ ಗೇಟ್, ಬೆಂಗಳೂರು-560 001. M.S. Building, 3rd Floor, Gate No. 3, Bangalore-560 001.
Tel. : 080-2235 3929 / 2203 2446 Fax : 080-2235 3927
e-mail : prsrdpr@karnataka.gov.in / principalsecretaryrdpr@gmail.com Website : www.rdpr.kar.nic.in